DECCAN HERALD
Online Newspaper Clipping Service
Dtd-Saturday, 30th, June- 2018
Page No. 01

# 10% fee hike final offer, DKS tells pvt med colleges

**BENGALURU, DHNS:** The state government will hold a meeting with private medical colleges one last time on Saturday with a final offer allowing them to hike fees by 10%, Medical Education Minister D K Shivakumar said Friday.

The Fee Regulatory Committee headed by Justice D V Shylendra Kumar has allowed medical colleges to hike fee by 8%. Last year, the fee for every MBBS seat in private colleges was Rs 6,32,500.

"Talks with private medical colleges have failed because they are demanding a 30% hike, or that they be allowed to fix the fees deemed universities are allowed to fix," Shivakumar said. Deemed universities have their own fee structure, he added.

"We have offered a 10% hike, but colleges are not relenting. They are saying they will move court. On Saturday, I asked the medical education secretary to hold one final meeting with colleges," the Shivakumar said.

Shivakumar pointed out that an earlier agreement signed between the government and private medical colleges allowed for a 10% fee hike.

**DH News Service**

ವಿಜಯ ಕರ್ನಾಟಕ



ಸಮತ್ವಮ್ ಕೇಂದ್ರದ ವೈದ್ಯಕೀಯ ನಿರ್ದೇಶಕ ಡಾ. ಶ್ರೀಕಂಠ ಹೇಳಿಕೆ। ಮಧುಮೇಹ ಕುರಿತ ರಾಷ್ಟ್ರೀಯ ಸಮ್ಮೇಳನ

# ಮಧುಮೇಹ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಳ

**ವಿಕ ಸುದ್ದಿಲೋಕ** ಕೋಲಾರ

ದೇಶದಲ್ಲಿ ಶೇ. 5ರಿಂದ 20ರಷ್ಟು ಮಂದಿ ವಯೋವೃದ್ಧರಿಗೆ ಮಧುಮೇಹ ಇದೆ. ಪಟ್ಟಣ ಪ್ರದೇಶದಲ್ಲಿ ಶೇ. 10ರಿಂದ 20ರಷ್ಟು ಮಂದಿ ಸಕ್ಕರೆ ಕಾಯಿಲೆಯಿಂದ ಬಳಲುತ್ತಿದ್ದಾರೆ. ಗ್ರಾಮೀಣ ಭಾಗದವರಲ್ಲಿ ಕಡಿಮೆ ಪ್ರಮಾಣದಲ್ಲಿದ್ದರೂ, ಇತ್ತೀಚೆಗೆ ಹೆಚ್ಚುತ್ತಿದೆ ಎಂದು ಸಮತ್ವಮ್ ಡಯಾಬಿಟೀಸ್ ಎಂಡೋಕ್ರೈನಾಲಜಿ ಕೇಂದ್ರದ ವೈದ್ಯಕೀಯ ನಿರ್ದೇಶಕ ಡಾ.ಎಸ್.ಎಸ್. ಶ್ರೀಕಂಠ ಅಭಿಪ್ರಾಯಪಟ್ಟರು.

ನಗರದ ಹೊರವಲಯದ ಟಮಕ ಬಳಿಯ ಶ್ರೀ ದೇವರಾಜ್ ಅರಸ್ ಉನ್ನತ ಶಿಕ್ಷಣ .ಮತ್ತು ಸಂಶೋಧನಾ ಸಂಸ್ಥೆ ವತಿಯಿಂದ ದೇವರಾಜ್ ಅರಸ್ ವೈದ್ಯಕೀಯ ಕಾಲೇಜು ರಜತ ಮಹೋತ್ಸವ ಸಭಾಂಗಣದಲ್ಲಿ 'ಸಮನ್ವಯ-2018' ಶೀರ್ಷಿಕೆಯಡಿ ಮಧುಮೇಹಕ್ಕೆ ಸಂಬಂಧಿಸಿದಂತೆ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿದರು.



ಕೋಲಾರ ಹೊರವಲಯದ ದೇವರಾಜ್ ಅರಸ್ ವೈದ್ಯಕೀಯ ಕಾಲೇಜಿನ ರಜತ ಮಹೋತ್ಸವ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಮ್ಮೇಳನವನ್ನು ಗಣ್ಯರು ಉದ್ಘಾಟಿಸಿದರು.

**ಕೆಟ್ಟ ಚಟಗಳಿಂದ ದೂರವಿರಿ:** ಮಧುಮೇಹವನ್ನು ತಡೆಗಟ್ಟುವ ಬಗ್ಗೆ ತಿಳಿಹೇಳಬೇಕಿದೆ. ಇತ್ತೀಚೆಗೆ ಈ ಕಾಯಿಲೆಗೆ ಉತ್ತಮ ಚಿಕಿತ್ಸೆ ದೊರಕುತ್ತಿದೆ. ಜತೆಗೆ, ಔಷಧ ಬೆಲೆಯೂ ಕಡಿಮೆಯಾಗಿದೆ. ಮೊದಲಿನಿಂದ ಸಕ್ಕರೆ ಪ್ರಮಾಣ, ರಕ್ತದೊತ್ತಡ, ಕೊಲೆಸ್ಟ್ರಾಲ್ ಮಟ್ಟದಲ್ಲಿ ಏರುಪೇರಾಗದಂತೆ ಎಚ್ಚರ ವಹಿಸಬೇಕು. ಜತೆಗೆ ಧೂಮಪಾನ, ಮದ್ಯಪಾನದಂತ ಕೆಟ್ಟ ಚಟಗಳಿಂದ ದೂರವಿರಬೇಕು. ಪ್ರಕೃತಿದತ್ತವಾಗಿ ಲಭ್ಯವಾಗುವ ಆಹಾರ ಪದಾರ್ಥಗಳನ್ನು ಸೇವಿಸುವುದನ್ನು ರೂಢಿಸಿಕೊಂಡರೆ, ಜೀವನಾದ್ಯಂತ ಆರೋಗ್ಯಕರವಾಗಿರಬಹುದು ಎಂದು ತಿಳಿಸಿದರು.

> ಧಾರ್ಮಿಕತೆ ಮತ್ತು ಆಧ್ಯಾತ್ಮವನ್ನು ಪ್ರತ್ಯೇಕ ಮಾಡಬೇಕು. ಧಾರ್ಮಿಕತೆ ಎಂಬುದನ್ನು ತೆಗೆದು ಹಾಕಬೇಕು. ದೈಹಿಕದಿಂದ ಮಾತ್ರವಲ್ಲ, ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಪ್ರಥಮ ಆದ್ಯತೆ ನೀಡಬೇಕು. ಇದರಿಂದ ಹಲವು ಕಾಯಿಲೆ ಬಾರದಂತೆ ತಡೆಗಟ್ಟಬಹುದು.
>
> **ಡಾ.ಎಸ್ಎಸ್.ಶ್ರೀಕಂಠ,**
> ವೈದ್ಯಕೀಯ ನಿರ್ದೇಶಕ,
> ಸಮತ್ವಮ್ ಡಯಾಬಿಟೀಸ್
> ಎಂಡೋಕ್ರೈನಾಲಜಿ ಕೇಂದ್ರ

**ಆಯುರ್ವೇದ. ಯೋಗ ಸಹಕಾರಿ:** ಎಸ್‌ಡಿಯುಎಎಚ್‌ಇಆರ್‌ನ ಡಾ. ನಿತಿನ್ ಪಾಟೀಲ್ ಮಾತನಾಡಿ, ಮಧುಮೇಹ ನಿಯಂತ್ರಣಕ್ಕೆ ಅಲೋಪತಿ ಜತೆ ಆಯುರ್ವೇದ, ಯೋಗವು ಸಹಕಾರಿಯಾಗಲಿದೆ. ಆದರೆ, ಇದನ್ನು ಮನಬಂದಂತೆ ಉಪಯೋಗಿಸಿಕೊಳ್ಳಬಾರದೆಂದರು.

ಆಯುರ್ವೇದ, ಯೋಗದತ್ತ ವಿದೇಶಗಳವರು ಗಮನ ಹರಿಸುತ್ತಿದ್ದಾರೆ. ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ. ಆದರೆ, ಭಾರತದಲ್ಲಿ ಹೆಚ್ಚು ಆಸಕ್ತಿ ನೀಡಲಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು.

ಯೋಗದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ವಿವಿಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಕೇಂದ್ರ ಸರಕಾರದ ಆಯುಷ್ ಸಚಿವಾಲಯದ ಡಾ.ಎನ್. ಶ್ರೀಕಾಂತ್, ದೇವರಾಜ್ ಅರಸ್ ಉನ್ನತ ಶಿಕ್ಷಣ, ಸಂಶೋಧನಾ ಸಂಸ್ಥೆಯ ಕುಲಾಧಿಪತಿ ಡಾ.ಎಸ್. ಕುಮಾರ್, ಉಪಕುಲಪತಿ ಡಾ.ಸಿ.ವಿ. ರಘುವೀರ್, ಸಂಸ್ಥೆಯ ಡಾ.ಕೆ. ಪ್ರಭಾಕರ್, ಡಾ.ಕಿಶೋರ್‌ಕುಮಾರ್, ಡಾ.ಪಣೀಶ್ ಭಾರದ್ವಾಜ್, ಡಾ.ಎ.ಲಕ್ಷ್ಮಯ್ಯ, ಆನಂದ್ ಬಾಲಯೋಗಿ ಭಾಗವಹಿಸಿದ್ದರು.

# ಮಧುಮೇಹ ಮೌನ ಕೊಲೆಗಾರ!

## ಸಮತ್ವಮ್ ಡಯಾಬಿಟಿಸ್ ಕೇಂದ್ರದ ವೈದ್ಯಕೀಯ ನಿರ್ದೇಶಕ ಡಾ.ಶ್ರೀಕಂಠ ಎಚ್ಚರಿಕೆ

■ ವಿಜಯವಾಣಿ ಸುದ್ದಿಜಾಲ ಕೋಲಾರ

ಮಧುಮೇಹದ ಬಗ್ಗೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳದಿದ್ದರೆ ಅದೊಂದು ಮೌನ ಕೊಲೆಗಾರನಾಗಿ ಮಾರ್ಪಡಾಗುತ್ತದೆ ಎಂದು ಬೆಂಗಳೂರಿನ ಸಮತ್ವಮ್ ಡಯಾಬಿಟಿಸ್ ಕೇಂದ್ರದ ವೈದ್ಯಕೀಯ ನಿರ್ದೇಶಕ ಡಾ.ಎಸ್.ಎಸ್. ಶ್ರೀಕಂಠ ಹೇಳಿದರು.

ನಗರದ ಟಮಕದಲ್ಲಿನ ಶ್ರೀ ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ಸಮನ್ವಯ-2018' ಮಧುಮೇಹ ಕುರಿತ ರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ ನೀಡಿ ಮತನಾಡಿ, ದೇಶದಲ್ಲಿ ಶೇ. 5ರಿಂದ 20ರಷ್ಟು ವಯೋವೃದ್ಧರಿಗೆ ಮಧುಮೇಹ ಇದೆ. ಪಟ್ಟಣ ಪ್ರದೇಶದಲ್ಲಿ ಶೇ. 10ರಿಂದ 20 ಮಂದಿ ಸಕ್ಕರೆ ಕಾಯಿಲೆಯಿಂದ ಬಳಲುತ್ತಿದ್ದಾರೆ. ನಗರ ಜೀವನಶೈಲಿ ಇದಕ್ಕೆ ಪ್ರಮುಖ ಕಾರಣ ಎಂದರು. ದೇಹದಲ್ಲಿ ಸಕ್ಕರೆ ಪ್ರಮಾಣ, ರಕ್ತದೊತ್ತಡ, ಕೊಬ್ಬಿನಾಂಶದಲ್ಲಿ ಏರುಪೇರಾಗದಂತೆ ಎಚ್ಚರ ವಹಿಸಬೇಕು. ಧೂಮಪಾನ, ಮದ್ಯಪಾನದಂತಹ ಕೆಟ್ಟ ಚಟಗಳಿಂದ ದೂರವಿರಬೇಕು. ಸಾವಯವ ಆಹಾರ ಸೇವನೆ ರೂಢಿಸಿಕೊಂಡರೆ ಜೀವನದುದ್ದಕ್ಕೂ ಆರೋಗ್ಯವಂತರಾಗಿ ಜೀವನ ನಡೆಸಬಹುದು ಎಂದರು.

ಅಧ್ಯಾತ್ಮ ತಳಹದಿ ಇಲ್ಲದೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ದೈಹಿಕವಾಗಿ ಸದೃಢಗೊಳ್ಳಲು ಮನುಷ್ಯನಿಗೆ ಯೋಗ ಅವಶ್ಯಕತೆ ಇದೆ. ಆತ್ಮ, ಶರೀರ, ಮನಸ್ಸು ಸಮನ್ವಯದಿಂದ ಕೆಲಸ ಮಾಡುವಂತೆ ಯೋಗ ಸಹಕಾರಿಯಾಗಲಿದೆ ಎಂದರು.



ಕೋಲಾರದ ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸಮ್ಮೇಳನವನ್ನು ಸಮತ್ವಮ್ ಡಯಾಬಿಟಿಸ್ ಕೇಂದ್ರದ ವೈದ್ಯಕೀಯ ನಿರ್ದೇಶಕ ಡಾ.ಎಸ್.ಎಸ್. ಶ್ರೀಕಂಠ ಉದ್ಘಾಟಿಸಿದರು. ವೈದ್ಯ ಡಾ.ನಿತಿನ್ ಪಾಟೀಲ್, ಡಾ.ಎನ್.ಶ್ರೀಕಾಂತ್ ಮತ್ತಿತರರು ಇದ್ದರು.

ವೈದ್ಯ ಡಾ.ನಿತಿನ್ ಪಾಟೀಲ್ ಮಾತನಾಡಿ, ವಿವಿಧ ಆಸನ ಮಾಡುವುದು ಯೋಗವೆಂದು ಭಾವಿಸಿದ್ದಾರೆ. ವಿದೇಶಗಳಲ್ಲೂ ಇದೇ ಪರಿಸ್ಥಿತಿ ಎದುರಾಗಿದೆ. ಯೋಗವನ್ನು ದೈಹಿಕ ವ್ಯಾಯಾಮ ಎಂದು ಭಾವಿಸದೆ ಅದರ ಪ್ರಮುಖ ಸಂದೇಶ, ಮಹತ್ವ ತಿಳಿದುಕೊಳ್ಳಬೇಕು ಎಂದರು.

ಕೇಂದ್ರ ಸರ್ಕಾರದ ಆಯುಷ್ ಸಚಿವಾಲಯ ಅಧಿಕಾರಿ ಡಾ.ಎನ್.ಶ್ರೀಕಾಂತ್, ದೇವರಾಜ ಅರಸು ಉನ್ನತ ಶಿಕ್ಷಣ, ಸಂಶೋಧನಾ ಸಂಸ್ಥೆ ಕುಲಪತಿ ಡಾ.ಎಸ್. ಕುಮಾರ್, ಉಪಕುಲಪತಿ ಡಾ.ಸಿ.ವಿ.ರಘುವೀರ್, ಆರೋಗ್ಯ ಅಧೀಕ್ಷಕ ಡಾ.ವಿ.ಲಕ್ಷ್ಮಯ್ಯ, ವೈದ್ಯರಾದ ಡಾ.ಕೆ.ಪ್ರಭಾಕರ್ ಹಾಜರಿದ್ದರು. ಯೋಗದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಸಂಯುಕ್ತ ಕರ್ನಾಟಕ



# ಡಯಾಬಿಟೀಸ್‌ಗೆ ಪ್ರಕೃತಿಯೇ ಪರಿಹಾರ

ಸಂ.ಕ ಸಮಾಚಾರ ಕೋಲಾರ

ಆಧ್ಯಾತ್ಮಿಕ ತಳಹದಿಯ ವಿಜ್ಞಾನದಿಂದ ದೂರ ಸರಿದಿದ್ದೇ ಮನುಷ್ಯನ ಆರೋಗ್ಯ ಹದಗೆಡಲು ಕಾರಣ. ಮಧುಮೇಹ ಒಂದು ಕಾಯಿಲೆಯಲ್ಲ, ಪ್ರಕೃತಿದೋಷ. ಈ ದೋಷ ನಿವಾರಣೆಗೆ ನಮ್ಮ ಜೀವನ ಶೈಲಿಯನ್ನು ಪ್ರಕೃತಿಗೆ ಪೂರಕವಾಗಿ ರೂಢಿಸಿಕೊಳ್ಳುವುದೇ ಚಿಕಿತ್ಸೆ ಎಂದು ಬೆಂಗಳೂರಿನ ಸಮಂತ್ರಮ್ ಡಯಾಬಿಟೀಸ್ ಎಂಡೋಕ್ರಾಲಜಿ ಸೆಂಟರ್ ಮೆಡಿಕಲ್ ಡೈರೆಕ್ಟರ್ ಡಾ. ಎಸ್.ಎಸ್.ಶ್ರೀಕಂಠ ಹೇಳಿದರು.

ಶುಕ್ರವಾರ ಅರಸ್ ವೈದ್ಯಕೀಯ ವಿ.ವಿಯಲ್ಲಿ ನಡೆದ ಸಮನ್ವಯ 2018 ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ ಶಿಸ್ತು ಮತ್ತು ಆಧ್ಯಾತ್ಮದ ಮೂಲಕ ಗುಣಮಟ್ಟದ ಜೀವನ ಕಾಯ್ದುಕೊಂಡರೆ ಶತಾಯುಷಿ ಆಗುವುದು ಕಷ್ಟವಲ್ಲ ಎಂದರು.

ಸಿಗರೇಟ್ ಮತ್ತು ಹೆಂಡ ಪ್ರಕೃತಿ ಮಾಡಿದ್ದಲ್ಲ, ಮಾನವ ನಿರ್ಮಿತ ದುಶ್ಚಟಗಳಿಗೆ ದೇಹವನ್ನು ಒಡ್ಡುವುದು ನಮ್ಮ ತಪ್ಪು. ರಾತ್ರಿ ಮಲಗುವಾಗ ನೋಡುವ ಮನಶ್ಶಾಂತಿ ಹಾಳು ಮಾಡುವ ಕ್ರೈಂ ಕಾರ್ಯಕ್ರಮಗಳನ್ನು ನೋಡುವುದು ಬಿಡಿ. ಇದರಿಂದ ದೇಹದಲ್ಲಿ ನಕಾರಾತ್ಮಕ ಹಾರ್ಮೋನುಗಳ ಸೃಷ್ಟಿ ನಿಂತು ಪ್ರಶಾಂತ ಮನಸಿನ ಮೂಲಕ ರೋಗ ನಿವಾರಣೆ ಆಗುತ್ತದೆ ಎಂದು ಸಲಹೆ ಮಾಡಿದರು.

ಇದಕ್ಕೆಲ್ಲ ಕಡಿವಾಣ ಹಾಕಬೇಕಾದ ವೈದ್ಯರೂ ಜನತೆಗೆ ಮನವರಿಕೆ ಮಾಡಿಕೊಡುತ್ತಿಲ್ಲ. ಕಾಯಿಲೆಗೆ ಮಾತ್ರೆ ಮತ್ತು ಇಂಜೆಕ್ಷನ್ ಗೀಚಿ ಕೊಡುತ್ತಿದ್ದು ಆಧ್ಯಾತ್ಮಿಕ ನಂಟಿಲ್ಲದ ವಿಜ್ಞಾನ ವಿಫಲವಾಗಿದೆ ಎಂದು ವಿಶ್ಲೇಷಿಸಿದರು.

ಮಕ್ಕಳಲ್ಲಿ ಶಿಸ್ತಿನ ಜೀವನದ ಬಗ್ಗೆ ಇನ್ನಾದರೂ ಜಾಗೃತಿ ಮೂಡಿಸುವ ಮೂಲಕ ಮುಂದಿನ ಜನಾಂಗವನ್ನಾದರೂ ಔಷಧಮುಕ್ತ ಪೀಳಿಗೆಯನ್ನಾಗಿ ಮಾಡಬೇಕು ಎಂದು ಸಲಹೆ ಮಾಡಿದರು.

ವಿಜ್ಞಾನಿ ಸಂತನಾಗಿಯೂ ಯೋಚನೆ ಮಾಡುವಂತಾಗಬೇಕು. ತಂತ್ರಜ್ಞಾನ ಹಾಗೂ ಧಾರ್ಮಿಕತೆಯ ಸಮ್ಮಿಲನದ ತಳಹದಿಯಾಗಿದ್ದ ಚರ್ಚ್ ಇದ್ದ ಜಾಗದಲ್ಲಿ ಕೇರಳದ ಇಸ್ರೋ ಸಂಸ್ಥೆ ಎದ್ದು ನಿಂತಿದೆ ಎಂಬುದನ್ನು ರಾಷ್ಟ್ರಪತಿ ಅಬ್ದುಲ್ ಕಲಾಂ ಸ್ಮರಿಸುತ್ತಿದ್ದರು ಎಂದು ನುಡಿದರು.

ಆಡಳಿತದಲ್ಲಿ ಆಧ್ಯಾತ್ಮ ಎಂಬ ಸೂತ್ರ ಅಳವಡಿಸಿಕೊಳ್ಳುವಲ್ಲಿ ಚೈನಾ ಮತ್ತು ಅಮೇರಿಕಾ ಮುಂಚೂಣಿಯಲ್ಲಿದೆ. ಅದನ್ನೆಲ್ಲ ನೀಡಿದ ಭಾರತದ ಮನೋಸ್ಥಿತಿಯಲ್ಲಿ ಇನ್ನಾದರೂ



ಸಕಾರಾತ್ಮಕ ಬದಲಾವಣೆ ಅಗತ್ಯವಿದ್ದು ರಾಜಕಾರಣಿಗಳು ಮತ್ತು ಅಧಿಕಾರಿಗಳೂ ಸಹಾ ಬದಲಾವಣೆಯ ಪರ್ವಕ್ಕೆ ಸಿದ್ಧರಾಗಬೇಕು ಎಂದು ಆಗ್ರಹಿಸಿದರು.

ಯೋಗವೆಂದರೆ ಆಸನ ಮಾತ್ರವಲ್ಲ, ಆತ್ಮ, ಶರೀರ ಮತ್ತು ಮನಸ್ಸನ್ನು ಯೋಗ, ಧ್ಯಾನ, ಪ್ರಾಣಾಯಾಮದ ಮೂಲಕ ಸಮನ್ವಯ ಸಾಧಿಸುವ ಕ್ರಿಯೆ. ಗುಣಮಟ್ಟದ ಜೀವನದಿಂದ ಆರೋಗ್ಯ ತಂತಾನೆ ಸಿಗುತ್ತದೆ. ಭಗವದ್ಗೀತೆಯನ್ನು ಮನೋರೋಗ ಚಿಕಿತ್ಸಾ ಕೇಂದ್ರಗಳಲ್ಲಿ ಪ್ರಮುಖ ಔಷಧವಾಗಿ ಬಳಸಲಾಗುತ್ತಿದೆ ಎಂಬುದು ಇದಕ್ಕೆ ಉದಾಹರಣೆ ಎಂದು ವಿವರಿಸಿದರು.

ಅರಸು ವಿ.ವಿ ಕುಲಪತಿ ಡಾ. ಎಸ್.ಕುಮಾರ್, ಉಪ ಕುಲಪತಿ ಡಾ.ಸಿ.ವಿ.ರಘುವೀರ್, ಡಾ.ಕೆ .ಪ್ರಭಾಕರ್, ಡಾ.ನಿತೀನ್‌ಪಾಟೀಲ್, ಡಾ.ಎನ್.ಶ್ರೀಕಾಂತ್, ಡಾ.ಆರ್. ಕಿಶೋರ್‌ಕುಮಾರ್ ಉಪಸ್ಥಿತರಿದ್ದರು.

## ಮಧುಮೇಹ ಮೌನ ಕೊಲೆಗಾರ

ಮಧುಮೇಹ ಶೇ.20 ಜನರಲ್ಲಿದ್ದು ನಗರ ಪ್ರದೇಶದ ಜೊತೆಗೆ ಹಳ್ಳಿಯಲ್ಲೂ ಅದರ ಪ್ರಮಾಣ ಏರುತ್ತಿದೆ. ಮಧುಮೇಹದಂತಹ ಮೌನ ಕೊಲೆಗಾರನನ್ನು ಸೌಮ್ಯವಾದ ಜೀವನ ಸಂಗಾತಿಯನ್ನಾಗಿಸಿಕೊಂಡು ಬದುಕುವ ಕಲೆಯನ್ನು ಯೋಗ ಮತ್ತು ಆಯುರ್ವೇದ ವಿಜ್ಞಾನ ಹೇಳಿಕೊಡುವ ಜತೆಗೆ ಪ್ರಕೃತಿ ಚಿಕಿತ್ಸೆಯ ದಾರಿ ತೋರಿಸುತ್ತದೆ. ರಕ್ತದ ಒತ್ತಡ ಮತ್ತು ಕೊಲೆಸ್ಟ್ರಾಲ್ ನಿವಾರಣೆಗೂ ಇದೇ ಮದ್ದು. ಇದು ಸಂಪೂರ್ಣ ಜೀವನ ಸಾಧನೆಗೆ ಪೂರಕ ಎಂದು ಶ್ರೀಕಂಠ ಬಣ್ಣಿಸಿದರು.

ನಮ್ಮಲ್ಲಿನ ಎಂಬಿಎ ಶಿಕ್ಷಣಕ್ಕೆ ಪರ್ಯಾಯವಾಗಿ ವಿದೇಶಗಳಲ್ಲಿ ವ್ಯಾಪಾರ ಮತ್ತು ಆಡಳಿತದ ನಿರ್ವಹಣೆಯಲ್ಲಿ ಭಗವದ್ಗೀತೆ ಸೂತ್ರಗಳನ್ನು ಅಳವಡಿಸಿಕೊಳ್ಳಲಾಗುತ್ತಿದೆ. ಉಪನಿಷತ್ತು ಮತ್ತು ಬ್ರಹ್ಮಸೂತ್ರವನ್ನು ವಿದೇಶಿಯರು ಅಧ್ಯಯನ ವಸ್ತುವನ್ನಾಗಿ ತೆಗೆದುಕೊಂಡಿದ್ದಾರೆ. ಆದರೆ ನಾವು ಮರೆತುಬಿಟ್ಟಿದ್ದೇವೆ ಎಂದು ವಿಷಾದಿಸಿದರು.

ಸಕ್ಕರೆ ಕಾಯಿಲೆಗೆ ಉತ್ತಮ ಚಿಕಿತ್ಸೆ, ಕಡಿಮೆ ಬೆಲೆಗೆ ಔಷಧಿಗಳು ದೊರೆಯುತ್ತಿದೆ. ಸಕ್ಕರೆ, ರಕ್ತದೊತ್ತಡ ಹಾಗೂ ಕೊಲೆಸ್ಟ್ರಾಲ್ ಮಟ್ಟ ಸರಿಯಾಗಿಟ್ಟುಕೊಂಡು ಸಿಗರೇಟ್ ಹಾಗೂ ಮದ್ಯಪಾನದಿಂದ ದೂರ ಉಳಿದು ದೇವರು ಸೃಷ್ಟಿಸಿದ ಹಣ್ಣು ತರಕಾರಿಗಳಂತಹ ಪ್ರಾಕೃತಿಕ ಆಹಾರ ತೆಗೆದುಕೊಂಡರೆ ಬೈಪಾಸ್-ಆಂಜಿಯೋಪ್ಲಾಸ್ಟ್ ಸರ್ಜರಿಗಳನ್ನು ದೂರ ಅಟ್ಟಬಹುದು.

## ಗೀತೆಯೇ ದೊಡ್ಡ ಕೊಡುಗೆ

ಟಿ.ವಿ. ಕಂಪ್ಯೂಟರ್‌ಗಳಿಂದ ನಮ್ಮ ಮಾನವೀಯ ಸಂಬಂಧಗಳು ಹಾಳಾಗಿದೆ. ಸಾಫ್ಟ್‌ವೇರ್ ಇಂಜಿನಿಯರುಗಳಲ್ಲೇ ವಿವಾಹ ವಿಚ್ಛೇದನಗಳು ಜಾಸ್ತಿಯಾಗುತ್ತಿದೆ. ಆಧ್ಯಾತ್ಮಿಕ ತಳಹದಿ ಇಲ್ಲದಿರುವುದೇ ಇದಕ್ಕೆಲ್ಲ ಕಾರಣ. ಭಾರತಕ್ಕಿಂತ ಉತ್ತಮ ದೇಶ ಮತ್ತೊಂದಿಲ್ಲ. ಆದರೆ ನಾವೇ ಎಲ್ಲವನ್ನೂ ಹಾಳು ಮಾಡಿಕೊಂಡಿದ್ದೇವೆ. ಇನ್ನಾದರೂ ಯುವ ಜನಾಂಗವು ದೇಶದ ಇತಿಹಾಸವನ್ನು ವಾಪಸ್ಸು ತರಬೇಕು ಎಂದು ಬಯಸಿದರು.

ಭಗವದ್ಗೀತೆ ಎಂಬುದು ಪ್ರಾಕ್ಟಿಕಲ್ ವೇದ. ಶ್ರೀಕೃಷ್ಣ ಅರ್ಜುನನಿಗೆ ಜೀವನದಲ್ಲಿ ಹೇಗೆ ಬಾಳ ಬದುಕಬೇಕೆಂದು ಹೇಳಿಕೊಟ್ಟಿದ್ದಾರೆ. ಅದನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು. ಸಾಕಷ್ಟು ಮಂದಿ ವೈದ್ಯರು ಭಗದ್ಗೀತೆಯನ್ನು ಮೆಂಟರ್ ಹೆಲ್ತ್‌ಕೇರ್ ಎನ್ನುತ್ತಾರೆ. ನಮಗೆ ಭಗವದ್ಗೀತೆಗಿಂತ ಅತ್ಯಮೂಲ್ಯವಾದ ಉಡುಗೊರೆ ಇಲ್ಲ. ಅದಕ್ಕಾಗಿಯೇ ಪ್ರಧಾನಿ ಮೋದಿ ಎಲ್ಲಿಗೆ ಹೋದರೂ ಗೀತೆಯನ್ನು ಉಡುಗೊರೆಯಾಗಿ ನೀಡುತ್ತಾರೆ ಎಂದು ಶ್ರೀಕಂಠ ತಿಳಿಸಿದರು.

ಪ್ರಜಾವಾಣಿ


Page No. 03(b)

### ಸಮತ್ವಮ್ ಡಯಾಬಿಟಿಸ್ ಕೇಂದ್ರದ ವೈದ್ಯಕೀಯ ನಿರ್ದೇಶಕ ಕಳವಳ

# ಯಾಂತ್ರಿಕ ಜೀವನದಿಂದ ಒತ್ತಡ ಹೆಚ್ಚಳ

ಪ್ರಜಾವಾಣಿ ವಾರ್ತೆ

**ಕೋಲಾರ:** 'ಅಧ್ಯಾತ್ಮದ ತಳಹದಿ ಇಲ್ಲದೆ ಏನನ್ನೂ ಸಾಧಿಸಲು ಆಗುವುದಿಲ್ಲ. ವಿಜ್ಞಾನಕ್ಕೆ ಅಧ್ಯಾತ್ಮದ ತಳಹದಿ ಇದ್ದು, ಶಿಸ್ತಿನ ಜೀವನ ಸಾಗಿಸುವ ನಿಟ್ಟಿನಲ್ಲಿ ವಿಜ್ಞಾನದ ಕಡೆ ಗಮನ ಹರಿಸಬೇಕು' ಎಂದು ಸಮತ್ವಮ್ ಡಯಾಬಿಟಿಸ್ ಕೇಂದ್ರದ ವೈದ್ಯಕೀಯ ನಿರ್ದೇಶಕ ಡಾ.ಎಸ್.ಎಸ್.ಶ್ರೀಕಂಠ ತಿಳಿಸಿದರು.

ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯು ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಮಧುಮೇಹ ರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, 'ಇತ್ತೀಚೆಗೆ ಮಾನವೀಯ ಸಂಬಂಧಗಳು ಹದಗೆಟ್ಟಿವೆ. ಯಾಂತ್ರಿಕ ಜೀವನದಿಂದ ಒತ್ತಡ ಹೆಚ್ಚಿ ಜನ ಕಾಯಿಲೆಗೆ ತುತ್ತಾಗುತ್ತಿದ್ದಾರೆ' ಎಂದು ಕಳವಳ ವ್ಯಕ್ತಪಡಿಸಿದರು.

'ಕಾಯಿಲೆ ಎಂದು ವೈದ್ಯರ ಬಳಿ ಹೋದರೆ ಚಿಕಿತ್ಸೆ ನೀಡುವುದು, ಔಷಧ ಮಾತ್ರೆ ಬರೆದುಕೊಡುವುದನ್ನು ಬಿಟ್ಟರೆ ಕಾಯಿಲೆ ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಶಾಶ್ವತ ಕ್ರಮಗಳ ಬಗ್ಗೆ ಮಾಹಿತಿ ನೀಡುವುದಿಲ್ಲ. ಜನರ ಆಹಾರ ಕ್ರಮ ಮತ್ತು ಜೀವನ ಶೈಲಿ ಬದಲಾದರೆ ರೋಗಮುಕ್ತ ಬದುಕು ಸಾಗಿಸಬಹುದು' ಎಂದು ಕಿವಿಮಾತು ಹೇಳಿದರು.

**ಪ್ರಕೃತಿ ದೋಷ:** 'ಮಧುಮೇಹ ಎಂಬುದು ಕಾಯಿಲೆಯಲ್ಲ. ಅದು ಪ್ರಕೃತಿಯ ದೋಷ. ಈ ಕಾಯಿಲೆ ಬಗ್ಗೆ ಮುನ್ನೆಚ್ಚರಿಕೆ ವಹಿಸದಿದ್ದರೆ ಅದೊಂದು ಮೌನ ಕೊಲೆಗಾರನಾಗಲಿದೆ. ಮಧುಮೇಹದ ಬಗ್ಗೆ ಎಚ್ಚರಿಕೆ ವಹಿಸಿದರೆ ಅದು ಸೌಮ್ಯವಾದ ಜೀವನ ಸಂಗಾತಿಯಾಗಲಿದೆ' ಎಂದರು.



ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯು ಕೋಲಾರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಮಧುಮೇಹ ರಾಷ್ಟ್ರೀಯ ಸಮ್ಮೇಳನದಲ್ಲಿ ಸಮತ್ವಮ್ ಡಯಾಬಿಟಿಸ್ ಕೇಂದ್ರದ ವೈದ್ಯಕೀಯ ನಿರ್ದೇಶಕ ಡಾ.ಎಸ್.ಎಸ್.ಶ್ರೀಕಂಠ ಮಾತನಾಡಿದರು

'ದೇಶದಲ್ಲಿ ಶೇ 5ರಿಂದ 20ರಷ್ಟು ಮಂದಿ ವಯೋವೃದ್ಧರಿಗೆ ಮಧುಮೇಹ ಸಮಸ್ಯೆಯಿದೆ. ಪಟ್ಟಣ ಪ್ರದೇಶದಲ್ಲಿ ಶೇ 10ರಿಂದ 20ರಷ್ಟು ಮಂದಿ ಈ ಕಾಯಿಲೆಯಿಂದ ಬಳಲುತ್ತಿದ್ದಾರೆ. ಗ್ರಾಮೀಣ ಭಾಗದಲ್ಲಿ ಮಧುಮೇಹಿಗಳ ಸಂಖ್ಯೆ ಕಡಿಮೆ ಇದ್ದರೂ ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿದೆ' ಎಂದು ವಿವರಿಸಿದರು.

**ಮುಖ್ಯಾಂಶಗಳು**

- ಹದಗೆಟ್ಟ ಮಾನವೀಯ ಸಂಬಂಧ
- ಕಾಯಿಲೆಗೆ ತುತ್ತಾಗುತ್ತಿರುವ ಜನರು
- ಹೆಚ್ಚುತ್ತಿರುವ ಮಧುಮೇಹಿಗಳ ಸಂಖ್ಯೆ

'ದೇಹದಲ್ಲಿನ ಸಕ್ಕರೆ ಪ್ರಮಾಣ, ರಕ್ತದೊತ್ತಡ, ಕೊಬ್ಬಿನಾಂಶದಲ್ಲಿ ಏರುಪೇರಾಗದಂತೆ ಎಚ್ಚರ ವಹಿಸಬೇಕು. ಧೂಮಪಾನ, ಮದ್ಯಪಾನದಂತ ದುಶ್ಚಟಗಳಿಂದ ದೂರವಿರಬೇಕು. ಸಾವಯವ ಆಹಾರ ಪದಾರ್ಥ ಸೇವಿಸುವುದನ್ನು ರೂಢಿಸಿಕೊಂಡರೆ ಆರೋಗ್ಯಕರವಾಗಿರಬಹುದು' ಎಂದು ಸಲಹೆ ನೀಡಿದರು.

**ಯೋಗ ಮಾರ್ಗೋಪಾಯ:** 'ಜನ ಇತ್ತೀಚೆಗೆ ಡಯಾಲಿಸಿಸ್, ಬೈಪಾಸ್ ಶಸ್ತ್ರಚಿಕಿತ್ಸೆಗೆ ಆದ್ಯತೆ ನೀಡುತ್ತಿದ್ದಾರೆ. ಆದರೆ, ಕಾಯಿಲೆ ಬಾರದಂತೆ ಮುನ್ನೆಚ್ಚರಿಕೆ ವಹಿಸುವುದಿಲ್ಲ. ಮಧುಮೇಹ ತಡೆಗಟ್ಟುವ ಬಗ್ಗೆ ಜನರಿಗೆ ಜಾಗೃತಿ ಮೂಡಿಸಬೇಕಿದೆ. ದೈಹಿಕವಾಗಿ ಸದೃಢರಾಗಲು ಯೋಗಾಭ್ಯಾಸ ಒಳ್ಳೆಯ ಮಾರ್ಗೋಪಾಯ. ಆತ್ಮ, ಶರೀರ ಮತ್ತು ಮನಸ್ಸು ಪರಸ್ಪರ ಸಮನ್ವಯದಿಂದ ಕೆಲಸ ಮಾಡಲು ಯೋಗ ಸಹಕಾರಿ' ಎಂದು ಅಭಿಪ್ರಾಯಪಟ್ಟರು.

'ಭಗವದ್ಗೀತೆಯು ಪ್ರಾಯೋಗಿಕ ವೇದಾಂತ. ಜೀವನದಲ್ಲಿ ಹೇಗೆ ಬಾಳಬೇಕು ಎಂಬುದನ್ನು ಇದು ತಿಳಿಸುತ್ತದೆ. ಉಪನಿಷತ್, ಬ್ರಹ್ಮಸೂತ್ರ ಸಾಮಾನ್ಯರಿಗೆ ಅರ್ಥವಾಗುವುದಿಲ್ಲ. ಆದರೆ, ಭಗವದ್ಗೀತೆ ಎಲ್ಲರೂ ಅರ್ಥವಾಗುತ್ತದೆ' ಎಂದರು.

> **ವಿವಿಧ ಆಸನ ಮಾಡುವುದೇ ಯೋಗವೆಂದು ಜನ ಭಾವಿಸಿದ್ದಾರೆ. ವಿದೇಶದಲ್ಲೂ ಇದೇ ಪರಿಸ್ಥಿತಿ ಇದೆ. ಆದರೆ, ಯೋಗದ ಪ್ರಮುಖ ಸಂದೇಶ ಮತ್ತು ಮಹತ್ವ ತಿಳಿಸಬೇಕಿದೆ.**
>
> **–ಡಾ.ಎಸ್.ಎಸ್.ಶ್ರೀಕಂಠ,** ಸಮತ್ವಮ್ ಡಯಾಬಿಟಿಸ್ ಕೇಂದ್ರದ ವೈದ್ಯಕೀಯ ನಿರ್ದೇಶಕ

**ಆಸಕ್ತಿ ತೋರುತ್ತಿಲ್ಲ:** 'ಇಡೀ ಜಗತ್ತೇ ಆಯುರ್ವೇದ ಮತ್ತು ಯೋಗದತ್ತ ಮುಖ ಮಾಡುತ್ತಿದೆ. ಯೋಗವು ವಿದೇಶಿಯರ ಜೀವನದ ಭಾಗವಾಗಿದೆ. ಆದರೆ, ಭಾರತೀಯರು ಯೋಗದ ಕಡೆ ಹೆಚ್ಚು ಆಸಕ್ತಿ ತೋರುತ್ತಿಲ್ಲ' ಎಂದು ವೈದ್ಯ ಡಾ.ನಿತಿನ್ ಪಾಟೀಲ್ ವಿಷಾದಿಸಿದರು.

'ಮಧುಮೇಹ ನಿಯಂತ್ರಣಕ್ಕೆ ಅಲೋಪತಿ ಜತೆ ಆಯುರ್ವೇದ, ಯೋಗವು ಸಹಕಾರಿಯಾಗುತ್ತದೆ. ಆದರೆ, ಇದನ್ನು ಮನಬಂದಂತೆ ಉಪಯೋಗಿಸಿಕೊಳ್ಳಬಾರದು' ಎಂದು ಸಲಹೆ ನೀಡಿದರು.

ಯೋಗ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದ ಕುಲಪತಿ ಡಾ.ಎಸ್.ಕುಮಾರ್, ಸಂಸ್ಥೆಯ ಕುಲಪತಿ ಡಾ.ಸಿ.ವಿ.ರಘುವೀರ್, ವೈದ್ಯಕೀಯ ಸೂಪರಿಂಟೆಂಡೆಂಟ್ ಡಾ.ಲಕ್ಷ್ಮಯ್ಯ, ವೈದ್ಯರಾದ ಡಾ.ಕೆ.ಪ್ರಭಾಕರ್, ಡಾ.ಕಿಶೋರ್‌ಕುಮಾರ್ ಪಾಲ್ಗೊಂಡಿದ್ದರು.

## ಶೇ 30ರಷ್ಟು ಶುಲ್ಕ ಹೆಚ್ಚಳಕ್ಕೆ ಪಟ್ಟು

# ವೈದ್ಯ ಶಿಕ್ಷಣ ಶುಲ್ಕ ಬಿಕ್ಕಟ್ಟು ಕಗ್ಗಂಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಕೋರ್ಸ್‌ಗಳ ಶುಲ್ಕ ಹೆಚ್ಚಳ ಸಂಬಂಧ ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ಖಾಸಗಿ ಕಾಲೇಜುಗಳ ಆಡಳಿತ ಮಂಡಳಿ ನಡುವಿನ ಮಾತುಕತೆ ಮುರಿದು ಬಿದ್ದಿದ್ದು, ಬಿಕ್ಕಟ್ಟು ಇನ್ನಷ್ಟು ಕಗ್ಗಂಟಾಗಿ ಪರಿಣಮಿಸಿದೆ.

ವೈದ್ಯಕೀಯ ಶಿಕ್ಷಣ ಸಚಿವ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಖಾಸಗಿ ಕಾಲೇಜುಗಳ ಸಂಘಟನೆಗಳ ಪದಾಧಿಕಾರಿಗಳ ಜತೆಗೆ ಶುಕ್ರವಾರ ಸಭೆ ನಡೆಯಿತು. 'ಶೇ 30ರಷ್ಟು ಶುಲ್ಕ ಹೆಚ್ಚಳಕ್ಕೆ ಅನುಮತಿ ನೀಡಬೇಕು. ಇಲ್ಲದಿದ್ದರೆ ಡೀಮ್ಡ್ ವಿಶ್ವವಿದ್ಯಾಲಯಗಳಷ್ಟೇ ಶುಲ್ಕ ಹೆಚ್ಚಳಕ್ಕೆ ಅನುಮತಿ ನೀಡಬೇಕು' ಎಂದು ಖಾಸಗಿ ಕಾಲೇಜುಗಳ ಪ್ರತಿನಿಧಿಗಳು ಪಟ್ಟು ಹಿಡಿದರು. 'ಶೇ 8ರಷ್ಟು ಶುಲ್ಕ ಹೆಚ್ಚಳ ಮಾಡಬಹುದು ಎಂದು ನ್ಯಾಯಮೂರ್ತಿ ಡಿ.ವಿ. ಶೈಲೇಂದ್ರ ಕುಮಾರ್ ಸಮಿತಿ ಶಿಫಾರಸು ಮಾಡಿದೆ. ಶೇ 10ರಷ್ಟು ಶುಲ್ಕ ಹೆಚ್ಚಳಕ್ಕೆ ಇಲಾಖೆಯು ಖಾಸಗಿ ಕಾಲೇಜುಗಳ ಜತೆಗೆ ಒಪ್ಪಂದ ಮಾಡಿಕೊಂಡಿದೆ. ಅಷ್ಟು ಹೆಚ್ಚಳ ಮಾಡಬಹುದು' ಎಂದು ಶಿವಕುಮಾರ್ ಭರವಸೆ ನೀಡಿದರು. ಅದಕ್ಕೆ ಪದಾಧಿಕಾರಿಗಳು ಒಪ್ಪಲಿಲ್ಲ.

'ಆಡಳಿತ ಮಂಡಳಿಗಳ ಜತೆಗೆ ನಾಲ್ಕು ಸುತ್ತಿನ ಸಭೆ ನಡೆಸಲಾಗಿದೆ. ಯಶಸ್ವಿಯಾಗಿಲ್ಲ. ನಮಗೆ ಹೆಚ್ಚು ಕಾಲಾವಕಾಶ ಇಲ್ಲ. ಶನಿವಾರ ಬೆಳಿಗ್ಗೆ ಇನ್ನೊಂದು ಸುತ್ತಿನ ಮಾತುಕತೆ ನಡೆಸುವಂತೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದೇನೆ' ಎಂದು ಶಿವಕುಮಾರ್ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

'ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ರಾಜ್ಯದ ವಿದ್ಯಾರ್ಥಿಗಳಿಗೆ ಉಚಿತವಾಗಿ ಶಿಕ್ಷಣ ನೀಡಲು ಅಥವಾ ಕಡಿಮೆ ಶುಲ್ಕ ವಿಧಿಸಲು ಒಪ್ಪಿವೆ. ಆದರೆ, ಬೇರೆ ರಾಜ್ಯದ ವಿದ್ಯಾರ್ಥಿಗಳಿಂದ ವರ್ಷಕ್ಕೆ ₹14 ಲಕ್ಷ ಪಡೆಯಲು ಅನುಮತಿ ನೀಡಬೇಕೆಂದೂ ಕೋರಿವೆ' ಎಂದು ಸಚಿವರು ತಿಳಿಸಿದರು.

### ಅರಸು ವೈದ್ಯಕೀಯ ಕಾಲೇಜಿನಲ್ಲಿ ರಾಷ್ಟ್ರೀಯ ಸಮ್ಮೇಳನ

# ಸಮಗ್ರ ಮಧುಮೇಹ ಚಿಕಿತ್ಸೆಗಾಗಿ ಅಧ್ಯಾತ್ಮಿಕ ತಳಹದಿ ಅಗತ್ಯ:ಶ್ರೀಕಂಠ




ಕೋಲಾರ ಜೂ ೨೯

ಮಾನವನ ಸಂಪೂರ್ಣ ಜೀವನಕ್ಕೆ ಶಿಸ್ತಿನ ಅಧ್ಯಾತ್ಮಕ ತಳಹದಿಯ ಮೇಲಿನ ಚಿಕಿತ್ಸೆ ಅತ್ಯಗತ್ಯ. ಹಿಂದಿನ ಆಯುರ್ವೇದ, ಯೋಗದೊಂದಿಗೆ ಇಂದಿನ ಅಲೋಪತಿ ಪದ್ಧತಿಯ ನಡುವೆ ಸಮನ್ವಯತೆಯಿಂದ ಪರಿಣಾಮಕಾರಿ ಫಲಿತಾಂಶ ಸಿಗುತ್ತೆ. ಮಧುಮೇಹದ ಚಿಕಿತ್ಸೆಗೆ ಇದು ಉಪಯುಕ್ತವಾದುದು ಎಂದು ಬೆಂಗಳೂರು ಸಮತ್ವಂ ಮಧುಮೇಹ ಎಂಡೋಕ್ರೆನಾಲಜಿ ಕೇಂದ್ರದ ವೈದ್ಯಕೀಯ ನಿರ್ದೇಶಕ ಡಾ|| ಎಸ್.ಎಸ್. ಶ್ರೀಕಂಠ ಅವರು ದೃಢವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಟಮಕದ ಶ್ರೀ ದೇವರಾಜ ಅರಸು ವೈದ್ಯಕೀಯ ಕಾಲೇಜಿನ ಜನರಲ್ ಮೆಡಿಸಿನ್ ವಿಭಾಗ ಮತ್ತು ಶ್ರೀ ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಸಮನ್ವಯ ವೈದ್ಯಕೀಯ ವಿಭಾಗಗಳ ಸಹಯೋಗದಲ್ಲಿ ರಜತ ಮಹೋತ್ಸವ ಸಭಾಂಗಣದಲ್ಲಿ 'ಸಮನ್ವಯ –೨೦೧೮ ಸಮಗ್ರ ಮಧು

ಮೇಹ ಚಿಕಿತ್ಸೆ–ಸಕ್ಕರೆ ಕಾಯಿಲೆಯಲ್ಲಿ ಇತ್ತೀಚಿನ ಬೆಳವಣಿಗೆಗಳು' ಕುರಿತ ಒಂದು ದಿನದ ರಾಷ್ಟ್ರೀಯ ಸಮ್ಮೇಳನಕ್ಕೆ ಜ್ಯೋತಿ ಬೆಳಗಿಸಿ ಚಾಲನೆ ನೀಡಿದ ಡಾ॥ ಶ್ರೀಕಂಠ ಅವರು ನಗರ ಪ್ರದೇಶಗಳಲ್ಲಿ ಮಧುಮೇಹ ಜಾಸ್ತಿಯಾಗಿದ್ದು, ಅಧ್ಯಾತ್ಮ ಹಿನ್ನೆಲೆಯ ಜೀವನಶೈಲಿ ಅಳವಡಿಸಿಕೊಂಡು, ಆಹಾರ ಪದ್ಧತಿಯಲ್ಲಿ ಪರಿವರ್ತನೆ ಮಾಡಿಕೊಂಡು, ಕುಡಿತ, ಧೂಮಪಾನ ತ್ಯಜಿಸಿದರೆ ಮೌನ ಕೊಲೆಗಾರನಾದ ಸಕ್ಕರೆ ಕಾಯಿಲೆ ತಡೆಗಟ್ಟಿ ಸೌಮ್ಯ ಜೀವನ ನಡೆಸಬಹುದು. ಮೂತ್ರಕೋಶ ವಿಫಲತೆ, ಗ್ಯಾಂಗ್ರಿನ್, ರೆಟಿನೋ ತೊಂದರೆ ಮೊದಲಾದವುಗಳನ್ನು ನಿಯಂತ್ರಿಸಬಹುದೆಂದೂ, ವೈದ್ಯರೂ ಜನರಲ್ಲಿ ಈ ದಿಶೆಯಲ್ಲಿ ತಿಳಿವಳಿಕೆ ಮೂಡಿಸಬೇಕೆಂದೂ, ಈಗ ಮಾನವೀಯ ಸಂಬಂಧ ಹಾಳಾಗಿದ್ದು, ಅಧ್ಯಾತ್ಮದ ಆರೋಗ್ಯ ಇಂದಿನ ಅವಶ್ಯಕತೆ ಎಂದು ತಿಳಿಸಿ, ಭಗವದ್ಗೀತೆ, ಅಬ್ದುಲ್‌ಕಲಾಂ, ಯಲ್ಲಪ್ಪ್ರಗಾಡ ಅವರನ್ನು ಸ್ಮರಿಸಿ, ವಿಜ್ಞಾನವು ಜೀವನವನ್ನು ವಿಸ್ತರಿಸಬಹುದು. ಆದರೆ ಅಧ್ಯಾತ್ಮಿಕತೆ ಜೀವನವನ್ನು ಆಳಕ್ಕೆ ಕರೆದೊಯ್ಯುತ್ತದೆ ಎಂದರು.

ಯೋಗ ಅಂದರೆ ಕೇವಲ ಆಸನಗಳು ಅಲ್ಲ. ಪ್ರಾಣಾಯಾಮ, ಧ್ಯಾನ, ಕರ್ಮ, ಜ್ಞಾನ ಯೋಗಗಳು ಇದ್ದು, ಅಧ್ಯಾತ್ಮಿಕ ಆಯುರ್ವೇದ ಔಷಧಿಯು ಕೆಲವು ಪೂರಕವಾಗಿ ಮತ್ತೆ ಕೆಲ ಸಹ ಬದಲಿಂತರಾಗಿ ಕೆಲಸ ಮಾಡುತ್ತದೆ ಎಂದು ಶ್ರೀಕಂಠ ವಿವರಿಸಿದರು.

ಕುಲಾಧಿಪತಿ ಡಾ॥ ಎಸ್. ಕುಮಾರ್ ಅಧ್ಯಕ್ಷತೆ ವಹಿಸಿದ್ದು, ಪೌಷ್ಟಿಕಾಂಶ ಮೌಲ್ಯಗಳುಳ್ಳದ್ದನ್ನು ಬಿಟ್ಟು, ಆರೋಗ್ಯದ ಬಗ್ಗೆ ಅಜ್ಞಾನ ಹೊಂದಿರುವುದು ವಿಪರ್ಯಾಸವಾಗಿದೆ. ಸಾಕಷ್ಟು ವೈಜ್ಞಾನಿಕ ಮಾಹಿತಿ ಕೊರತೆಯಿಂದ ಆಯುರ್ವೇದ ಹಿಂದೆ ಬಿದ್ದಿದೆ ಎಂದರು.

ಸಮನ್ವಯ ತಂಡದಿಂದ ಪ್ರಾರ್ಥನೆ, ಡಾ॥ ಕೆ. ಪಭಾಕರ್

(ಕೊನೆಯ ಪುಟ ನೋಡಿ)

ಕೋಲಾರಪತ್ರಿಕೆ



# ಸಮಗ್ರ ಮಧುಮೇಹ ಚಿಕಿತ್ಸೆಗಾಗಿ ಅಧ್ಯಾತ್ಮಿಕತಳಹದಿ ಅಗತ್ಯ:ಶ್ರೀಕಂಠ

(ಮೊದಲನೇ ಪುಟದಿಂದ)

ರಿಂದ ಸ್ವಾಗತ, ಉಪಕುಲಪತಿ ಡಾ|| ಸಿ.ವಿ. ರಘುವೀರ್‌ರಿಂದ ಅತಿಥಿಗಳ ಪರಿಚಯ, ಡಾ|| ಫಣೀಶ್ ಭಾರದ್ವಾಜ್‌ರಿಂದ ವಂದನೆ, ಡಾ|| ಗೀತಾ, ಡಾ|| ಆಶಾರಿಂದ ನಿರೂಪಣೆಗಳಾದವು.

ಸಮನ್ವಯ ವೈದ್ಯಕೀಯ ವಿಭಾಗದ ಮುಖ್ಯಸ್ಥ ಡಾ|| ನಿತಿನ್ ಪಾಟೀಲ್ ಅವರು ಅಂತರರಾಷ್ಟ್ರೀಯ ಯೋಗ ದಿನದ ವರದಿ ವಾಚಿಸಿದರು.

ಮನಸ್ಸಿನ ನಿರ್ವಹಣೆಗಾಗಿ ಯೋಗ ಅಗತ್ಯ. ಆಹಾರ, ವಿಹಾರ, ಆಚಾರ ವಿಚಾರಗಳಲ್ಲಿ ಸಮನ್ವಯತೆ ನಮ್ಮ ಪದ್ಧತಿಯಲ್ಲಿ ಹುದುಗಿದೆ. ಅದು ಬೆಳಕಿಗೆ ಬಂದು ಸಂಶೋಧನಾ ಫಲಿತಾಂಶಗಳು ಪ್ರಾಯೋಗಿಕವಾಗಿ ಜಾರಿಗೆ ಬರಬೇಕಿದೆ ಎಂದರು.

ನವದೆಹಲಿಯ ಆಯುರ್ವೇದ ವಿಜ್ಞಾನದ ಸಂಶೋಧನಾ ಕೇಂದ್ರದ ಉಪನಿರ್ದೇಶಕ ಡಾ|| ಎನ್. ಶ್ರೀಕಾಂತ್ ಅವರು ಆಯುರ್ವೇದದಿಂದ ಮಧುಮೇಹಿಗಳ ಆರೋಗ್ಯದ ಗುಣಮಟ್ಟ ಸುಧಾರಿಸುತ್ತಿದೆ ಎನ್ನುವುದು ಸಂಶೋಧನೆಗಳಿಂದ ಸಾಬೀತಾಗಿದೆ ಎಂದು ಹೇಳಿದರು.

ಎನ್‌ಐಡಿಆರ್‌ಐ ಸಂಶೋಧನಾ ಅಧಿಕಾರಿ ಡಾ|| ಎಸ್. ಕಿಶೋರ್ ಕುಮಾರ್ ಅವರು ಆಯುರ್ವೇದ ಸಂಶೋಧನೆಗಳ ಬಗ್ಗೆ ತಿಳಿಸಿದರು.

ವೈದ್ಯಕೀಯ ಅಧೀಕ್ಷಕ ಡಾ|| ಲಕ್ಷ್ಮಯ್ಯ ಮತ್ತು ಯೋಗ ಚಿಕಿತ್ಸಕಿ ಸುನಿತಾ ಅತಿಥಿಗಳ ಪರಿಚಯವನ್ನು ಮಾಡಿಕೊಟ್ಟರು.

ಯೋಗ ದಿನದಂದು ನಡೆದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಪ್ರಾಂಶುಪಾಲ ಡಾ|| ಹಿತೇಂದ್ರ ಕುಮಾರ್ ಮತ್ತಿತರ ಅತಿಥಿಗಳು ಬಹುಮಾನ ವಿತರಿಸಿದರು.

ಭಿತ್ತಿಪತ್ರ ರಚನಾ ಸ್ಪರ್ಧೆಯಲ್ಲಿ ಚಿನ್ಮಯ ಶಾಲೆಯ ದರ್ಶನ್, ಗ್ರೀನ್ ವ್ಯಾಲಿ ಪಬ್ಲಿಕ್ ಸ್ಕೂಲಿನ ಸ್ನೇಹಪ್ರಭಾ, ಆರ್.ಎಲ್.ಜಾಲಪ್ಪ ಶಾಲೆಯ ರಂಜಿತ್ ಕುಮಾರ್, ಚಿನ್ಮಯ ವಿದ್ಯಾಲಯದ ದಿವ್ಯ ಜ್ಯೋತಿ ಹಾಗೂ ಗುಪ್ತಾಸ್‌ನ ಸೋನಿ, ಬಾಲ್ಡ್‌ವಿನ್ ಶಾಲೆಯ ಕರುಣಾ, ಸುಗುಣಾ ಶಾಲೆಯ ಎಸ್.ಎಸ್. ರಾಹುಲ್ ಹಾಗೂ ಪ್ರಬಂಧ ಸ್ಪರ್ಧೆಯಲ್ಲಿ ಚಿನ್ಮಯ ವಿದ್ಯಾಲಯದ ಮಧುಶ್ರೀ, ಮಹಿಳಾ ಸಮಾಜದ ಕಿಶನ್, ಆರ್‌ವಿ ಶಾಲೆಯ ಲಾವಣ್ಯ ಮತ್ತು ಆರ್‌ಎಲ್ ಜಾಲಪ್ಪ ಶಾಲೆಯ ರವೀನಾ ಬಹುಮಾನ ಪಡೆದರು.